ರಿಚರ್ಡ್ ಲೀನ ಅಧ್ಯಯನ ಉಲ್ಲೇಖಿಸುತ್ತದೆ. ವಾರಕ್ಕೆ 35 ಗಂಟೆಗಳ ಕೆಲಸ, ಆಧುನಿಕ ಜಗತ್ತಿನಲ್ಲಿ ನಾವು ಕೈಗೊಳ್ಳುವ ಸರಾಸರಿ ಕೆಲಸಕ್ಕಿಂತ ಸಾಕಷ್ಟು ಕಡಿಮೆಯಿದೆ. ಮಿಕ್ಕ ಕಾಲದಲ್ಲಿ ಅವರಿಗೆ ವಿರಾಮ ಕಾಲದ ಹವ್ಯಾಸಗಳಿರುತ್ತವೆ. ಸಂಗೀತ, ನೃತ್ಯ ಕಲೆಗಳು ಉದ್ಭವವಾಗಿರುವುದೇ ವಿರಾಮ ಕಾಲವಿರುವುದರಿಂದಾಗಿ. ಹೆಚ್ಚು ತಂತ್ರಜ್ಞಾನದ ಉಗಮವಾಗುತ್ತಿದ್ದಂತೆ, ನಮ್ಮ ಜೀವನ ಸರಳವಾಗುತ್ತಾ ವಿರಾಮಕಾಲ ಹೆಚ್ಚಬೇಕು. ಇದರಿಂದಾಗಿ ಸಾಮಾಜಿಕ ಸೌಹಾರ್ದವೂ, ಸಾಮೂಹಿಕ ಕಾರ್ಯಕ್ರಮಗಳೂ ಹೆಚ್ಚಬೇಕು. ಆದರೆ, ಹಾಗಾಗುತ್ತಿದೆಯೇ? ಇದು ಆಸಕ್ತಿಯ ಪ್ರಶ್ನೆ.

ವಿಖ್ಯಾತ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ 1930ರ ಕಾಲದಲ್ಲಿಯೇ ಒಂದು ಭವಿಷ್ಯವಾಣಿಯನ್ನು ಕೊಟ್ಟಿದ್ದರು. ನಮ್ಮಲ್ಲಿರುವ ಉತ್ಪಾದಕತೆ ಮತ್ತು ತಂತ್ರಜ್ಞಾನವನ್ನು ಪರಿಗಣಿಸಿದಾಗ – ಸುಖಮಯ ಜೀವನ ನಡೆಸಲು ವಾರಕ್ಕೆ ಕೇವಲ ಹದಿನೈದು ಗಂಟೆಗಳ ಕೆಲಸ ಮಾತ್ರ ಸಾಕು. ಅತ್ಯಾಧುನಿಕ ಮತ್ತು ಆರಾಮವಾದ ಜೀವನ ನಡೆಸಲು ಎಷ್ಟು ಕೆಲಸ ಬೇಕೋ, ತಂತ್ರಜ್ಞಾನದ ಸುಳಿವಿಲ್ಲದ ಆದಿವಾಸಿಗಳೂ ತಮ್ಮ ಜೀವನವನ್ನು ಸುಖಮಯವಾಗಿ ನಡೆಸಲು ಅಷ್ಟೇ ಗಂಟೆಗಳ ಕೆಲಸದಲ್ಲಿ ತೊಡಗಿರುತ್ತಾರೆನ್ನುವುದು ಒಂದು ವಿಚಿತ್ರ ವಿರೋಧಾಭಾಸವಲ್ಲವೇ? ನಾವು ಕೀನ್ಸ್ ಹೇಳಿದ ತಂತ್ರಜ್ಞಾನದ ಮಟ್ಟವನ್ನು ಅನೇಕ ದಶಕಗಳ ಹಿಂದೆಯೇ ಸಾಧಿಸಿದ್ದರೂ ನಮ್ಮ ಪೂರ್ವಜರಷ್ಟೇ ಅಥವಾ ಅವರಿಗಿಂತ ಹೆಚ್ಚು ಕೆಲಸ ಮಾಡುತ್ತಿದ್ದೇವೆ. ನಮ್ಮ ಸರ್ಕಾರಗಳೂ ಪ್ರಗತಿ ಮತ್ತು ಆರ್ಥಿಕ ಬೆಳವಣಿಗೆಯ ಬಾಲವನ್ನು ಹಿಡಿದು ಹೊರಟಿವೆ. ಇದು ನಮ್ಮನ್ನು ಯಾವ ದಿಕ್ಕಿನಲ್ಲಿ ಒಯ್ಯುತ್ತಿದೆನ್ನುವುದೇ ಒಂದು ವಿಚಿತ್ರ ಕಗ್ಗಂಟು.

ಈ ಹದಿನೈದು ಗಂಟೆಗಳ ಕೆಲಸದ ಥಿಯರಿಯಲ್ಲಿ ಕೇವಲ ಆಹಾರವನ್ನು ಹುಡುಕುವುದು, ಅದನ್ನು ಪರಿಷ್ಕರಿಸುವುದು ಮತ್ತು ಉಣ್ಣುವುದನ್ನು ಮಾತ್ರ ಪರಿಗಣಿಸಿದ್ದಾರೆ. ಆದರೆ, ಅದಕ್ಕಿಂತ ಹೆಚ್ಚಿನ ಅರ್ಥವಿರಬಹುದೇ. ಸುಜ಼್‌ಮನ್ ಚಾರ್ಲ್ಸ್ ಡಾರ್ವಿನ್ನನ ಅಧ್ಯಯನವನ್ನು ಉಪಯೋಗಿಸಿ ಮತ್ತೊಂದು ಮಾತನ್ನೂ ಸೇರಿಸುತ್ತಾರೆ.




ಜೀವಜಂತುಗಳ ಉಗಮ ಮತ್ತು ವಿಕಾಸದ ಬಗ್ಗೆ ಡಾರ್ವಿನ್ನನ ಥಿಯರಿಯ ಪ್ರಕಾರ ಕೆಲಸಕ್ಕೆ ಬಾರದ, ಉಪಯೋಗವಿಲ್ಲದ ಅಂಗಾಂಗಗಳು ದೀರ್ಘಕಾಲದಲ್ಲಿ ನಾಪತ್ತೆಯಾಗಿ, ಬದುಕುಳಿಯುವುದಕ್ಕೆ ಅವಶ್ಯವಾದ ಅಂಗಾಂಗಗಳಷ್ಟೇ ಉಳಿಯುತ್ತವೆ. ಹಾಗೆಯೇ ಶಕ್ತಿಶಾಲಿ ಜೀವಪ್ರಭೇದಗಳು ಉಳಿದು ಮಿಕ್ಕವು ನಶಿಸುತ್ತವೆ. ಈ ನಿಟ್ಟಿನಲ್ಲಿ ನವಿಲುಗಳಿಗೆ ದೊಡ್ಡ ಹಾಗೂ ಕೆಲಸಕ್ಕೆ ಬಾರದ ಗರಿಗಳೇಕಿವೆ? ಈ ಪ್ರಶ್ನೆಯನ್ನು ಡಾರ್ವಿನ್ ಕೇಳಿಕೊಳ್ಳುತ್ತಾನೆ. ಅದಕ್ಕೆ ಉತ್ತರವೂ ತನ್ನದೇ 'ಸರ್ವೈವಲ್' (ಬದುಕುಳಿಯುವ) ವಿವರಣೆಯಲ್ಲಿ ದೊರೆಯುತ್ತದೆ. ರಾಜಮನೆತನದ ಸ್ತ್ರೀಯರು ಧರಿಸುವ ವಿಸ್ತಾರವಾದ ದಿರಿಸುಗಳು ಯಾವ ನವಿಲಿನ ಗರಿಗುಚ್ಛಕ್ಕೂ ಕಡಿಮೆಯಿಲ್ಲ. ನಾವು ಉಳಿಯಲು ನಮ್ಮ ಶಕ್ತಿಯನ್ನು ಹೇಗೆ ವ್ಯಯಿಸುತ್ತೇವೆಯೋ, ಹಾಗೆಯೇ, ನಿರರ್ಥಕವಾಗಿ ಆಕರ್ಷಕವಾಗಿರಲೂ ಅಷ್ಟೇ ಶ್ರಮಪಡುತ್ತೇವೆ. ಈ ಆಕರ್ಷಣೆ ವಂಶಾವಳಿಯ ವೃದ್ಧಿ ಮತ್ತು ಆ ತಳಿಯ ಉಳಿವಿಗೆ ಅವಶ್ಯಕವಾಗಿರಬಹುದು.